ಅಲ್ಲಿ ಸಂಬಂಧಪಟ್ಟವರನ್ನು ಕೇಳಿದಾಗ ಕೆಲವು ಕ್ವೆಯರೀಸ್ ಇತ್ತು, ಕಂಟ್ರಾಕ್ಟರ್ಸ್‌ಗೆ ಪತ್ರ ಬರೆದು ಕೂಡ ಆಗಿದೆ ಪೇಮೆಂಟ್ ಕೂಡ ಆಗಿದೆ, ಡಿಲೇ ಆಗತಕ್ಕಂಥ ರೀತಿಯಲ್ಲಿ ಇವತ್ತು ಕೆಲಸವನ್ನು ಪ್ರಾರಂಭ ಮಾಡಿಯೂ ಡಿಲೇ ಏಕಾಯಿತು ಎನ್ನುವುದು ಒಂದು, ಪೇಮೆಂಟ್ ಡಿಲೇ ಏಕೆ ಮಾಡಿದಿರಿ ಎನ್ನುವುದು ಒಂದು, ಅದರ ಬಗ್ಗೆ we have taken precaution. ಈಗ ಎಲ್ಲಾ ಕೆಲಸವು ಮುಗಿದಿದೆ, ಪೇಮೆಂಟ್ ಕೂಡ ಮಾಡಿರುತ್ತೇವೆ.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ : ಮಾನ್ಯ ಅಧ್ಯಕ್ಷರೆ, ಈ ರಸ್ತೆಯನ್ನು ಪೂರ್ತಿ ಮಾಡಿ ಆ ಭಾಗದ ರೈತರಿಗೆ ನಾಗರೀಕರಿಗೆ ಅನುಕೂಲ ಮಾಡಿಕೊಡಲು ತಮ್ಮ ಮುಖಾಂತರ ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್ : ಮಾನ್ಯ ಅಧ್ಯಕ್ಷರೆ, ಸೇಡಂ ತಾಲ್ಲೂಕಿನಲ್ಲಿ ಸಾಕಷ್ಟು ರಸ್ತೆ ಕೆಲಸಗಳನ್ನು ತೆಗೆದುಕೊಂಡಿದ್ದೇವೆ, ಇದನ್ನು ದುರಸ್ತಿ ಮಾಡಿಸುವಂಥ ಪ್ರಯತ್ನವನ್ನು ಮಾಡುತ್ತೇವೆ.

ಕೊಡಗು ಜಿಲ್ಲೆಯಲ್ಲಿ ಕಾಡಾನೆಗಳ ಹಾವಳಿ ತಡೆಗಟ್ಟಲು ಕ್ರಮ ಕೈಗೊಳ್ಳುವ ಬಗ್ಗೆ

343 (3071) : ಶ್ರೀ ಅಪ್ಪಚ್ಚುರಂಜನ್ ಎಂ.ಪಿ (ಸೋಮವಾರಪೇಟೆ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೊಡಗು ಜಿಲ್ಲೆಯಲ್ಲಿ ಕಾಡಾನೆಗಳ ಹಾವಳಿಗೆ ಕಳೆದ ಮೂರು ವರ್ಷಗಳಿಂದ ಬಲಿಯಾದವರ ಸಂಖ್ಯೆ ಎಷ್ಟು;

ಆ) ಸತ್ತವರ ಕುಟುಂಬಕ್ಕೆ ಎಷ್ಟು ಪರಿಹಾರ ಬಿಡುಗಡೆ ಮಾಡಲಾಗಿದೆ;

ಇ) ಆನೆಗಳ ಹಾವಳಿಯಿಂದ ಗಾಯಾಳುಗಳಾದವರಿಗೆ ಮತ್ತು ಆಸ್ತಿ ಬೆಳೆ ನಷ್ಟವಾದವರಿಗೆ ಎಷ್ಟು ಪರಿಹಾರ ನೀಡಲಾಗಿದೆ; ಮತ್ತು ಎಷ್ಟು ಬಾಕಿ ಇದೆ: (ಕಳೆದ ಮೂರು ವರ್ಷಗಳ ವಿವರ ಒದಗಿಸುವುದು);

ಈ) ಕಾಡಾನೆ ಹಾವಳಿ ತಡೆಗಟ್ಟಲು ಏನು ಕ್ರಮ ಕೈಗೊಳ್ಳಲಾಗಿದೆ (ವಿವರ ನೀಡುವುದು)?

ಶ್ರೀ ಕೆ.ಹೆಚ್. ರಂಗನಾಥ್ (ಮಾನ್ಯ ಅರಣ್ಯ ಸಚಿವರು):

ಅ) 2000–01 ರಲ್ಲಿ – 9 ಜನ

2001–02 ರಲ್ಲಿ – ಇಲ್ಲ

2002–03 ರಲ್ಲಿ – 6 ಜನ

2003–04 ರಲ್ಲಿ – 6 ಜನ

ಒಟ್ಟು – 21 ಜನರು ಕಾಡಾನೆಗಳಿಂದ ಸಾವಿಗೀಡಾಗಿದ್ದಾರೆ.

ಆ) ಸರ್ಕಾರಿ ಆದೇಶದ ಮೇರೆಗೆ ಕಾಡಾನೆ ಹಾವಳಿಯಿಂದ ಮೃತಪಟ್ಟ ವ್ಯಕ್ತಿಯ ಕಾನೂನು ಬದ್ಧ ವಾರಸುದಾರರಿಗೆ ನಿಯಮಾನುಸಾರ ರೂ. 1.00 ಲಕ್ಷ ದಯಾತ್ಮಕ ಧನ ಮಂಜೂರು ಮಾಡಲು ಅವಕಾಶವಿದ್ದು, ಅದರಂತೆ 20 ಪ್ರಕರಣಗಳಲ್ಲಿ ಕಾಡಾನೆ ಹಾವಳಿಯಿಂದ ಮೃತಪಟ್ಟ ವ್ಯಕ್ತಿಗಳ ವಾರಸುದಾರರಿಗೆ ಪ್ರತೀ ಪ್ರಕರಣದಲ್ಲಿ ರೂಪಾಯಿ ಒಂದೊಂದು ಲಕ್ಷದಂತೆ ಒಟ್ಟು ರೂ. 20.00 ಲಕ್ಷ (ರೂಪಾಯಿ ಇಪ್ಪತ್ತು ಲಕ್ಷ) ದಯಾತ್ಮಕ ಧನ ಬಿಡುಗಡೆ ಮಾಡಿ ಪಾವತಿಸಲಾಗಿದೆ.

ದಿನಾಂಕ 13.4.2003 ರಂದು ಕರಡಿಗೋಡು ಗ್ರಾಮದ ಕೆಂಪ ಎಂಬುವವರನ್ನು ಕಾಡಾನೆಯು ತುಳಿದು ಕೊಂದಿದ್ದು, ಈ ಪ್ರಕರಣದಲ್ಲಿ ಮೃತ ವ್ಯಕ್ತಿಯ ಕಾನೂನು ಬದ್ಧ ವಾರಸುದಾರರು ದೊರೆಯದ ಕಾರಣ. ಹಣ ಪಾವತಿ ಮಾಡಿರುವುದಿಲ್ಲ.

ವರ್ಷ	ಗಾಯಾಳು	ಆಸ್ತಿ ನಷ್ಟ	ಬೆಳೆನಷ್ಟ	ಜಾನುವಾರು ನಷ್ಟ	ಒಟ್ಟು
2000–01	25,000	–	5,62,830	20.800	6,08,630
2001–02	41,777	–	6,53,707	30,575	7,72,059
2002–03	30,270	5,000	7,83,952	1,000	8,20,222
2003–04	25,000	–	89,858	–	1,14,858

ಇದುವರೆವಿಗೆ ಮಂಜೂರಾಗಿ ಪಾವತಿಗೆ ಬಾಕಿಯಿರುವ ಪ್ರಕರಣಗಳು

ವಿವರ	ಮಡಿಕೇರಿ ವಿಭಾಗ		ವೀರಾಜಪೇಟೆ		ಒಟ್ಟು	
	ಪ್ರಕರಣ ಸಂಖ್ಯೆ	ಮೊತ್ತ ರೂ.	ಪ್ರಕರಣ ಸಂಖ್ಯೆ	ಮೊತ್ತ ರೂ.	ಪ್ರಕರಣ ಸಂಖ್ಯೆ	ಮೊತ್ತ ರೂ.
ಕೃಷಿ ನಷ್ಟ	102	1,91,346	24	42,000	126	2,33,346
ಮಾನವಗಾಯ	2	17,522	–	–	2	17,522
ಜಾನುವಾರು	2	4,000	–	–	2	4,000
ಒಟ್ಟು	106	2,12,868	24	42,000	130	2,54,868

ಈ) ಕೊಡಗು ಜಿಲ್ಲೆಯಲ್ಲಿ ಕಾಡಾನೆಗಳ ಹಾವಳಿ ತಡೆಗಟ್ಟಲು ಅರಣ್ಯ ಇಲಾಖೆಯ ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿದೆ.

1. ಕಾಡಾನೆಗಳ ಹಾವಳಿ ಅಧಿಕವಾಗಿರುವ ಸೂಕ್ಷ್ಮ ಸ್ಥಳಗಳಲ್ಲಿ ಅರಣ್ಯ ಪ್ರದೇಶದ ಅಂಚಿನಲ್ಲಿ ಆನೆ ನಿರೋಧಕ ಕಂದಕಗಳ ನಿರ್ಮಾಣ ಮಾಡುವುದು.
2. ಕಾಡಾನೆಗಳ ಹಾವಳಿ ಇರುವ ಸ್ಥಳಗಳಲ್ಲಿ ಅರಣ್ಯ ಪ್ರದೇಶಗಳ ಅಂಚಿನಲ್ಲಿ ಸೌರಶಕ್ತಿ ಬೇಲಿ ನಿರ್ಮಾಣ ಮಾಡುವುದು.
3. ಕಾಡಾನೆಗಳು ಅರಣ್ಯ ಪ್ರದೇಶದಿಂದ ಸಾರ್ವಜನಿಕ ವಸಹತುಗಳಿಗೆ ನುಗ್ಗಿ ಹಾವಳಿ ನಡೆಸುವುದನ್ನು ನಿಯಂತ್ರಿಸಲು ಕಾವಲುಗಾರರ ತಾತ್ಕಾಲಿಕ ಕಾವಲು ಪಡೆಗಳನ್ನು ನಿಯೋಜಿಸುವುದು.
4. ಅರಣ್ಯ ಪ್ರದೇಶಗಳಲ್ಲಿ ಕಾಡಾನೆಗಳಿಗೆ ವರ್ಷವಿಡೀ ಕುಡಿಯುವ ನೀರು ದೊರಕುವಂತೆ ಅರಣ್ಯದಲ್ಲಿರುವ ಕೆರೆಗಳ ಹೂಳು ತೆಗೆಯುವುದು.
5. ಸಾರ್ವಜನಿಕ ಆಸ್ತಿಪಾಸ್ತಿಗಳಿಗೆ ಹಾಗೂ ಮಾನವ ಸಾವಿಗೆ ಕಾರಣವಾಗಿರುವ ಪುಂಡ ಕಾಡಾನೆಗಳನ್ನು ಗುರುತಿಸಿ ಅವುಗಳನ್ನು ಹಿಡಿಯುವುದು.

ಶ್ರೀ ಅಪ್ಪಚ್ಚುರಂಜನ್ ಎಂ.ಪಿ : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ. ಅವರು ಕೊಟ್ಟ ಮಾಹಿತಿ ಪ್ರಕಾರ ಕಳೆದ 4 ವರ್ಷಗಳಿಂದ ಬೆಳೆ ನಷ್ಟ ಮತ್ತು ಗಾಯಾಳುಗಳಿಗೆ ಕೊಟ್ಟಂತಹ ಪರಿಹಾರ ಸುಮಾರು 23,15,769–00 ರೂ. ಗಳು ಅಷ್ಟು ಹಣವನ್ನು ಅವರು ಖರ್ಚನ್ನು ಮಾಡಿದ್ದಾರೆ.

ಅದರ ಜೊತೆ ಜೊತೆಗೆ ಪ್ರಕರಣಗಳಲ್ಲಿ ಎಷ್ಟು ಹಣ ಕೊಡಲಿಕ್ಕೆ ಬಾಕಿ ಇದೆ ಎಂದು ಕೇಳಿದರೆ ಮಡಿಕೇರಿ ವಿಭಾಗ ಮತ್ತು ವೀರಾಜಪೇಟೆ ವಿಭಾಗದಲ್ಲಿ ಸುಮಾರು 4,67,736 ರೂ.ಗಳು ಬಾಕಿ ಇದೆ ಎಂದು ಹೇಳಿದ್ದಾರೆ. ಆ ಬಾಕಿ ಇರಲಿಕ್ಕೆ ಕಾರಣವೇನು? ಹಣ ಇಲ್ಲವೇ? ಅದರ ಜೊತೆಗೆ ಕಾಡಾನೆಗಳ ಹಾವಳಿಯನ್ನು ತಡೆಗಟ್ಟಲು ಏನೇನು ಕ್ರಮಗಳನ್ನು ಕೈಗೊಂಡಿದ್ದೀರಿ ಎಂದು ನಾನು ಕೇಳಿದ್ದೇನೆ. ಅದಕ್ಕೆ ಕಂದಕ ನಿರ್ಮಾಣ ಮಾಡುವುದು, ಪಹರೆಯನ್ನು ಹಾಕುವುದು, ಎಂದು ಉತ್ತರವನ್ನು ಕೊಟ್ಟಿದ್ದಾರೆ. ಇದುವರೆಗೆ ಮಾಹಿತಿಯನ್ನು ಹಾಕಲಿಲ್ಲವೇ? ಯಾವಾಗ ಹಾಕುತ್ತೀರಿ? ಕಾಡಾನೆಗಳ ಹಾವಳಿಯನ್ನು ತಡೆಗಟ್ಟಲು ಸೌರಶಕ್ತಿಯನ್ನು ಯಾವಾಗ ಉಪಯೋಗಿಸುತ್ತೀರಿ? ಇದುವರೆಗೆ ಈ ಬಾಬಿಗೆ ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದೀರಿ?

ಶ್ರೀ ಕೆ.ಹೆಚ್. ರಂಗನಾಥ್ : ಮಾನ್ಯ ಅಧ್ಯಕ್ಷರೆ, ಬಿಡುಗಡೆ ಮಾಡಿರುವ ಹಣದ ವಿವರವನ್ನು ಉತ್ತರದಲ್ಲಿ ಒದಗಿಸಲಾಗಿದೆ, ಬಾಕಿ ಇರುವ ಹಣದ ವಿವರವನ್ನು ಸಹ ಒದಗಿಸಲಾಗಿದೆ.

ಶ್ರೀ ಅಪ್ಪಚ್ಚುರಂಜನ್ ಎಂ.ಪಿ : ಮಾನ್ಯ ಅಧ್ಯಕ್ಷರೆ, ಬಾಕಿ ಇರುವ ಹಣದ ವಿವರವನ್ನು ಒದಗಿಸಲಾಗಿದೆ ಎಂದು ಹೇಳುತ್ತಿದ್ದಾರೆ, ಹಣ ಕೊಡಲಿಕ್ಕೆ ಬಾಕಿ ಇರಲು ಕಾರಣವೇನು? 4,67,736 ರೂ.ಗಳ ಹಣ ಕೊಡಲಿಕ್ಕೆ ಬಾಕಿ ಇದೆ ಎಂದು ತಮ್ಮ ಉತ್ತರದಲ್ಲಿ ಕೊಟ್ಟಿದ್ದಾರೆ. ಇವರು ಹಣ ಬಿಡುಗಡೆ ಮಾಡಿದ್ದೇವೆಂದು ಹೇಳುತ್ತಾರೆ, ಹಾಗಾದರೆ ಅಧಿಕಾರಿಗಳು ಹಣ ಬಿಡುಗಡೆ ಮಾಡಿಲ್ಲವೆ? ದಯವಿಟ್ಟು ಏನು ಕಾರಣವೆಂದು ತಾವು ಹೇಳಬೇಕು.

ಶ್ರೀ ಕೆ.ಹೆಚ್. ರಂಗನಾಥ್ : ಮಾನ್ಯ ಅಧ್ಯಕ್ಷರೆ, ಹಣ ಬಿಡುಗಡೆ ಮಾಡಿದ ಮೇಲೆ ಅಧಿಕಾರಿಗಳು ಕೊಡಬೇಕಾಗುತ್ತದೆ. ಹಣ ಕೊಡುವುದಕ್ಕೆ ಉದ್ದೇಶಪೂರ್ವಕವಾಗಿ ತಡಮಾಡುತ್ತಿದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಅಪ್ಪಚ್ಚುರಂಜನ್ ಎಂ.ಪಿ : ಮಾನ್ಯ ಅಧ್ಯಕ್ಷರೆ, ಅದರ ಜೊತೆಗೆ ಖಾಯಂ ಆಗಿ ಜಖಂ ಆದವರಿಗೆ ಪರಿಹಾರವನ್ನು ಕೊಡುವುದಿಲ್ಲ. ಬಹಳಷ್ಟು ಕಡಿಮೆ ಹಣವನ್ನು ಕೊಡುತ್ತಾರೆ. ಅವರು ಆಸ್ಪತ್ರೆಯಲ್ಲಿ ಎಷ್ಟು ಹಣವನ್ನು ಖರ್ಚು ಮಾಡಿದ್ದಾರೆ ಅಷ್ಟು ಹಣವನ್ನು ಕೊಡಲಿಕ್ಕೆ ಸರ್ಕಾರ ತಯಾರಿದೆಯೇ? ಇಲ್ಲದಿದ್ದರೆ ಏಕೆ ಕೊಡುವುದಿಲ್ಲವೆಂದು ಸರ್ಕಾರ ಉತ್ತರ ಹೇಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್ : ಮಾನ್ಯ ಅಧ್ಯಕ್ಷರೆ, ಈಗ ಎಷ್ಟು ಹಣ ಕೊಡುತ್ತೇವೆ ಎನ್ನುವುದರ ಬಗ್ಗೆ ನಾವು ಹೇಳಿದ್ದೇವೆ. ಅದನ್ನು ಬದಲಾವಣೆ ಮಾಡಬೇಕು ಎನ್ನುವಂಥದ್ದು, ಅದು ಪಾಲಿಸಿ ಮ್ಯಾಟರ್ ಆಗುತ್ತದೆ, ಅದನ್ನು ವಿಚಾರ ಮಾಡೋಣ.

ಶ್ರೀ ಅಪ್ಪಚ್ಚುರಂಜನ್ ಎಂ.ಪಿ : ಮಾನ್ಯ ಅಧ್ಯಕ್ಷರೆ, ವಿಚಾರಣೆ ಮಾಡುತ್ತೇವೆಂದು ಹೇಳುವುದು ಬಹಳ ಸುಲಭದ ಉತ್ತರ. ಒಬ್ಬನಿಗೆ ಪರ್ಮನೆಂಟ್ ಇಂಜುರಿ ಆಗಿ ಸ್ಪೈನಲ್ ಕಾರ್ಡ್‌ಗೆ ಪೆಟ್ಟಾಗಿ ಏಳುವುದಕ್ಕೆ ಸಾಧ್ಯವಾಗುವುದಿಲ್ಲ. ಅದಕ್ಕೆ ಪರಿಹಾರ ಕೊಟ್ಟಿರುವುದು ಕೇವಲ 10,000 ರೂ.ಗಳು ಅವನ ಪರಿಸ್ಥಿತಿ ಏನಾಗಬೇಕು? ಅವನು ತನ್ನ ಕುಟುಂಬದವರನ್ನು ಹೇಗೆ ಸಾಕಬೇಕು? ಇದಕ್ಕೆ ಸರ್ಕಾರದವರು ತಾವು ಆದಷ್ಟು ಬೇಗನೆ ಕಾನೂನಿನಲ್ಲಿ ಏನು ಕ್ರಮವನ್ನು ಕೈಗೊಳ್ಳುತ್ತೀರಿ? ಕಾನೂನಿಗೆ ತಿದ್ದುಪಡಿಯನ್ನು ತಂದು ಕೂಡಲೇ ಆಗಿರುವ ನಷ್ಟವನ್ನು ಪರಿಹಾರ ಮಾಡುತ್ತೀರಾ? ಅದರ ಜೊತೆಯಲ್ಲಿ ಈಗ ಹೇಳಿದಿರಿ ಕಂದಕವನ್ನು ತೋಡುವುದು ಎಂದು, ಯಾವಾಗ ತೋಡುವುದು?

ಈಗಾಗಲೇ ಕಳೆದ 15 ತಿಂಗಳಲ್ಲಿ ಸುಮಾರು 15 ಜನ ಸತ್ತಿದ್ದಾರೆ. ಮೊನ್ನೆ ಕೂಡ ಒಂದು ಸಾವು ಆಗಿದೆ. ಅವರಲ್ಲಿ ಕಾಡಾನೆಗಳ ಹಾವಳಿಗೆ ತುತ್ತಾಗಿದ್ದಾರೆ. ಇದೇ ರೀತಿಯಾಗಿ ಪರಿಹಾರವನ್ನು ಕೊಟ್ಟುಕೊಂಡು ಹೋಗುವುದನ್ನು ಶಾಶ್ವತವಾಗಿ ತಡೆಗಟ್ಟಲು ಸೌರಶಕ್ತಿಯನ್ನು ಏನಾದರೂ ಉಪಯೋಗಿಸುತ್ತಾರಾ ಎನ್ನುವುದರ ಬಗ್ಗೆ ತಾವು ಹೇಳಬೇಕಾಗುತ್ತದೆ.

ಶ್ರೀ ಕೆ.ಹೆಚ್. ರಂಗನಾಥ್ : ಮಾನ್ಯ ಅಧ್ಯಕ್ಷರೆ, ನಾನು ಹೇಳಿದ್ದೇನೆ ಸ್ವಾಮಿ. ಈಗ ನಿಗದಿ ಮಾಡಿರುವ ಪ್ರಕಾರ ಹಣವನ್ನು ಬಿಡುಗಡೆ ಮಾಡುತ್ತಿದ್ದೇವೆ. ಮಾನ್ಯ ಸದಸ್ಯರು ಏನು ಅಭಿಪ್ರಾಯವನ್ನು ಪಡುತ್ತಿದ್ದಾರೆಂದರೆ, ಅಷ್ಟು ಹಣ ಸಾಕಾಗುವುದಿಲ್ಲ, ಅವರು ಖರ್ಚು ಮಾಡಿರುವಷ್ಟು ಹಣವನ್ನು ಕೊಡುತ್ತೀರಾ ಎಂದು, ಖರ್ಚು ಮಾಡಿರುವಷ್ಟು ಹಣ ಕೊಡುವುದಕ್ಕೆ ಸಾಧ್ಯವಾಗಲಾರದು. ಅದೊಂದು ನೀತಿಯ ಪ್ರಶ್ನೆಯಾಗಿರುವುದರಿಂದ ನಂತರ ವಿಚಾರ ಮಾಡೋಣ.

ಶ್ರೀ ಡಿ.ಎ. ಸದಾನಂದಗೌಡ : ಮಾನ್ಯ ಅಧ್ಯಕ್ಷರೆ, ಇಲ್ಲಿ ಮಾನ್ಯ ಅರಣ್ಯ ಸಚಿವರನ್ನು ಕೇಳುತ್ತೇನೆ. ನಾನು ಮೊನ್ನೆ ಶನಿವಾರ ಮಡಿಕೇರಿ, ಸೋಮವಾರಪೇಟೆ ಕಡೆಗೆ ಹೋಗಿದ್ದೆ. ತಾವು ಹೋಗಿದ್ದೀರಿ. ನಾನು ಅವರ ಮನೆಗಾಗಿ ಹೋಗಿರಲಿಲ್ಲ, ಬೇರೆ ಕಾರ್ಯಕ್ರಮಕ್ಕೆ ಹೋಗಿದ್ದೆ. ವ್ಯಾಪಕವಾಗಿ ಅಲ್ಲಿ ಕೇಳಿಬರುವಂಥ ದೊಡ್ಡ ಸಂಗತಿ ಏನೆಂದರೆ, ಯಾವುದೇ ಶಾಶ್ವತ ಪರಿಹಾರಗಳು ಇಲ್ಲ. ಕೇವಲ ನಿಮ್ಮ ಹೇಳಿಕೆಗಳು ಪತ್ರಿಕೆಗಳಲ್ಲಿ ಬರುತ್ತಿವೆಯೇ ಹೊರತು ಅದು ಕಾರ್ಯಗತವಾಗುತ್ತಿಲ್ಲ. ಸೌರಶಕ್ತಿಯಿಂದ ತಡೆಗಟ್ಟುವುದಾಗಲಿ, ಕಂದಕವನ್ನು ತೋಡುವುದಾಗಲಿ, ನಿಗದಿತ ಮಟ್ಟದಲ್ಲಿ ಯಾವುದೂ ಕೂಡ ಮುಂದುವರೆಯುತ್ತಿಲ್ಲ. ಎರಡನೆಯದಾಗಿ ಹೇಳುವುದಾದರೆ, ಈ ಕಾಡಾನೆಗಳ ಹಾವಳಿಯನ್ನು ತಡೆಗಟ್ಟಬೇಕೆಂದು ಹೇಳುವ ಅರಣ್ಯಾಧಿಕಾರಿಗಳು ಆ ಊರಿನಲ್ಲಿ ಕೆಲವು ಬಾರಿ ಲಭ್ಯತೆಯೇ ಇರುವುದಿಲ್ಲವೆನ್ನುವಂತಹ ದೂರುಗಳೂ ಸಹ ಕೇಳಿಬರುತ್ತಿವೆ; ಅದು ತಮ್ಮ ಗಮನಕ್ಕೆ ಬಂದಿದೆಯೋ ಅಥವಾ ಇಲ್ಲವೋ ಅದು ನನಗೆ ಗೊತ್ತಿಲ್ಲ. ಮೊನ್ನೆ ದಿವಸ ಇತ್ತೀಚೆಗೆ ನಡೆದಂತಹ ಆ ಒಂದು ಆನೆಯ ಹಾವಳಿಯಲ್ಲಿ ನೊಂದವರ ಕುಟುಂಬದವರಿಗೆ ಇನ್ನೂ ಕೂಡ ಯಾವ ಕಡೆಯಿಂದಲೂ ಕೂಡ ಸಹಾಯಹಸ್ತ ಬರಲಿಲ್ಲವೆನ್ನತಕ್ಕಂತಹ ಮಾತನ್ನೂ ಕೂಡ ಹೇಳಿದ್ದಾರೆ. ಇದರಲ್ಲಿ ನನ್ನ ಅಪೇಕ್ಷೆ ಇಷ್ಟೇ, ತಾವು ಇದರ ಬಗ್ಗೆ ದಯವಿಟ್ಟು, ಸ್ವಲ್ಪ ಸೀರಿಯಸ್ಸಾಗಿ ತೆಗೆದುಕೊಳ್ಳಬೇಕು. ಇವತ್ತೆಲ್ಲಾ ಕಾಡಾನೆಗಳು ನಾಡೆಲ್ಲಾ ಅಂದರೆ ತುಮಕೂರು ಮತ್ತಿತರ ಕಡೆಗೆ ಹೋಗುವಂತಹದ್ದನ್ನು ನಾವು ನೋಡುತ್ತಿದ್ದೇವೆ. ಇದನ್ನು ಸ್ವಲ್ಪ ಗಂಭೀರವಾಗಿ ಪರಿಗಣಿಸಬೇಕು. ಇದು ಅಲ್ಲಿ ಇಲ್ಲಿ ಬಂತು ಎಂದು ಹೇಳುವ ಮಾತಲ್ಲ. ಇದರ ಬಗ್ಗೆ ಸ್ವಲ್ಪ ಸೀರಿಯಸ್ಸಾಗಿ ಪರಿಗಣನೆಗೆ ತೆಗೆದುಕೊಳ್ಳಬೇಕು. ಗಾಯಗೊಂಡವರಿಗೆ ಪೂರ್ತಿ ಪ್ರಮಾಣದ ಚಿಕಿತ್ಸೆಯ ವೆಚ್ಚವನ್ನಾದರೂ ಕೊಡುವಂತಹ ಹಣವನ್ನು ಸರ್ಕಾರ ಭರಿಸಬೇಕು. ಆನೆಗಳ ಈ ಹಾವಳಿಗೆ ಯಾರೂ ದೊಡ್ಡ ದೊಡ್ಡವರು ಇದರಲ್ಲಿ ಸಿಕ್ಕಿಹಾಕಿಕೊಳ್ಳುವುದಿಲ್ಲ. ಯಾರು ಕಾಡಿನ ಪಕ್ಕದಲ್ಲಿದ್ದಾರೆ, ಯಾರು ಕೂಲಿ ಕೆಲಸವನ್ನು ಮಾಡುವವರು ಇದ್ದಾರೆ, ಅಂತಹವರೇ ಇದರಲ್ಲಿ ಸಿಕ್ಕಿಕೊಳ್ಳುವ ಕಾರಣ ಇದರ ಬಗ್ಗೆ ಸ್ವಲ್ಪ ಗಂಭೀರವಾದ ಚಿಂತನೆಯನ್ನು ಮಾಡುವಂತಹ ಅವಶ್ಯಕತೆ ಇದೆ, ಆದಕಾರಣ ತಾವು ದಯವಿಟ್ಟು ಅವರಿಗೆ ಪೂರ್ತಿ ಪ್ರಮಾಣದ ಆಸ್ಪತ್ರೆಯ ಖರ್ಚನ್ನು ಭರಿಸುವಂತಹ ವ್ಯವಸ್ಥೆಗಳನ್ನು ಮಾಡಬೇಕು ಮತ್ತು ಸಾಂಕೇತಿಕ ಪರಿಹಾರಗಳು ಅಂದರೆ 5 ರಿಂದ 10 ಸಾವಿರ ರೂ. ಎಂದು ಹೇಳುವಂಥದ್ದಲ್ಲ. ಮೊನ್ನೆ ಸ್ಪೈನಲ್ ಕಾರ್ಡ್ ಕಟ್ ಆದವರು, ಹಾಗೂ ಅವರ ಕುಟುಂಬದವರು ಬಂದಿದ್ದರು ಸಾರ್, ನಾವು ಬದುಕುವಂತಹ

ಪರಿಸ್ಥಿತಿಯಿಲ್ಲ ಎಂದು ಅವರು ಹೇಳುತ್ತಾರೆ. ತಾವು ಖಂಡಿತವಾಗಿ ಈ ರೀತಿಯ ಮಾನವೀಯ ವಿಚಾರಗಳಲ್ಲಿ ಹೆಚ್ಚು ಒತ್ತು ಕೊಡುವಂತಹ ಒಬ್ಬ ಹಿರಿಯ ಮಂತ್ರಿಗಳಾಗಿದ್ದೀರಿ ಎಂಬುದನ್ನು ಗಮನದಲ್ಲಿಟ್ಟುಕೊಂಡು ನಾನು ಈ ಮಾತನ್ನು ಹೇಳುತ್ತಿದ್ದೇನೆ.

ಶ್ರೀ ಕೆ.ಹೆಚ್. ರಂಗನಾಥ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಶ್ರೀ ಡಿ.ವಿ. ಸದಾನಂದ ಗೌಡರ ಪ್ರಶ್ನೆ ಬೇರೆ, ಇಲ್ಲಿ ಕೇಳಿರತಕ್ಕಂತಹ ಪ್ರಶ್ನೆ ಬೇರೆಯಾಗಿದೆ. ಆದರೆ ಅವರು ಕೊನೆಗೆ ಅದರ ಬಗ್ಗೆ ಒತ್ತಿ ಹೇಳಿದರು. ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ಖರ್ಚಾಗತಕ್ಕಂತಹ ಹಣವನ್ನು ಕೊಡಬೇಕೆಂದು ಹೇಳಿದರು, ಅದು ಸರ್ಕಾರದ ನೀತಿಯ ಪ್ರಶ್ನೆಯಾಗಿದೆ. ಇದರ ಬಗ್ಗೆ ಮಾನ್ಯ ಸದಸ್ಯರು ಹೇಳುತ್ತಿದ್ದರು, ಈ ಬಜೆಟ್ ನಿಮ್ಮದು ಎಂದು. ಇದು ಸದನದ ಬಜೆಟ್ ಆಗಿದೆ. ಇದು ಕಾಂಗ್ರೆಸ್‌ನವರ ಬಜೆಟ್ ಅಲ್ಲ, ತಾವು ಬಜೆಟ್ ಬಗ್ಗೆ ಒಪ್ಪಿಗೆ ಕೊಟ್ಟಿರುವುದರಿಂದ ಇದು ನಿಮ್ಮ ಬಜೆಟ್ ಕೂಡ ಹೌದು. ಆದಕಾರಣ ಪರಿಸ್ಥಿತಿ ಏನಿದೆ, ರಿಸೋರ್ಸ್‌ಸ್ ಏನಿದೆ, ಅದನ್ನು ನೋಡಿಕೊಂಡು ಮಾಡಿಕೊಡುವಂತಹ ದೃಷ್ಟಿಯಿರುವುದರಿಂದ ಈ ರೀತಿ ಆಗಿದೆ. ನಾಳೆ ದಿವಸ ತಮ್ಮ ಸರ್ಕಾರ ಅಧಿಕಾರಕ್ಕೆ ಬಂದರೆ ಕೇಳಿದಷ್ಟು ಹಣವನ್ನು ಕೊಟ್ಟುಕೊಂಡು ಹೋದರೆ ಅದು ಸಾಧ್ಯವಾಗುವುದಿಲ್ಲ. ಅದರ ತೀವ್ರತೆ ಮತ್ತು ಸೀರಿಯಸ್‌ನೆಸ್ ಏನಿದೆ ಅದನ್ನು ಸರ್ಕಾರವು ಗಮನಿಸುತ್ತದೆ. ಅದರ ಬಗ್ಗೆ ವಿಚಾರ ಮಾಡುತ್ತೇನೆ ಎನ್ನುವ ಮಾತನ್ನು ಪ್ರಸ್ತಾಪ ಮಾಡಿದ್ದೇನೆ.

ಶ್ರೀ ಡಿ.ವಿ. ಸದಾನಂದಗೌಡ : ತಾವು ಕಂದಕವನ್ನು ತೋಡುವಂತಹ ವಿಚಾರವನ್ನು ಹೇಳುತ್ತೀರಿ, ಆ ಮನುಷ್ಯರಿಗೆ ಆದಂತಹ ತೊಂದರೆಗೆ ಸ್ವಲ್ಪ ಅಂತಃಕರಣ ಕೂಡ ಈ ಸರ್ಕಾರಕ್ಕೆ ಇರಬೇಕೆಂಬುದು ನನ್ನ ಒಂದು ಭಾವನೆಯಾಗಿದೆ.

ಅಧ್ಯಕ್ಷರು : ಮಾನ್ಯ ಸಚಿವರು ಅದರ ಬಗ್ಗೆ ವಿಚಾರ ಮಾಡುತ್ತೇವೆಂದು ಹೇಳಿದ್ದಾರೆ.

ಶ್ರೀ ಕೆ.ಹೆಚ್. ರಂಗನಾಥ್ : ಸ್ಪೈನಲ್ ಕಾರ್ಡ್ ಕಟ್ ಆಗಿರುವವರ ಬಗ್ಗೆ ಮಾನ್ಯ ಸದಸ್ಯರು ನನ್ನ ಗಮನಕ್ಕೆ ತಂದಿದ್ದರೆ, ಅದರ ಬಗ್ಗೆ ನಾವು ವಿಶೇಷವಾದಂತಹ ಗಮನವನ್ನು ಕೊಡುವುದಕ್ಕೆ ಸಾಧ್ಯವಾಗುತ್ತಿತ್ತು. ಸಾಧಾರಣವಾಗಿ ಹೇಳುವುದಾದರೆ, ಇಂಜ್ಯೂರೀಸ್ ಆದವರಿಗೂ ಒಂದೇ ಸ್ಪೈನಲ್ ಕಾರ್ಡ್ ಕಟ್ ಆದವರಿಗೂ ಒಂದೇ ಎಂದು ನಾನು ಹೇಳುವುದಿಲ್ಲ. ಸ್ಪೈನಲ್ ಕಾರ್ಡ್ ಕಟ್ಟಾದರೆ ಮತ್ತೇನಾದರೂ ಆದರೆ ಅದು ಪರ್ಮನೆಂಟ್ ಇಂಫೇರ್ ಆಗುತ್ತದೆ. ನಾನು ಈಗಾಗಲೇ ನಮ್ಮ ಅಧಿಕಾರಿಗಳಿಗೆ ಹೇಳಿದ್ದೇನೆ, ಇಂಜ್ಯೂರೀಸ್‌ನಲ್ಲೂ ಕೂಡ ಪರ್ಮನೆಂಟಾಗಿ ಅವನನ್ನು ಇನ್‌ವ್ಯಾಲಿಡೇಟ್ ಮಾಡತಕ್ಕಂತಹದ್ದು ಏನಾದರೂ ಆದರೆ, ಗಾಯ ವಗೈರೆ ಆದರೆ ಅದರ ಬಗ್ಗೆ ಏನು ಮಾಡಬೇಕೆಂಬುದರ ಬಗ್ಗೆ ವಿಚಾರ ಮಾಡೋಣ ಎನ್ನುವ ಮಾತನ್ನು ಹೇಳಿದ್ದೇನೆ: ಅದನ್ನು ಮಾಡುತ್ತೇನೆ.

ಶ್ರೀ ಅಪ್ಪಚ್ಚುರಂಜನ್ ಎಂ.ಪಿ : ಸುಮಾರು 4 ವರ್ಷಗಳಲ್ಲಿ ಅವರು ಸುಮಾರು 7 ಲಕ್ಷ ರೂಪಾಯಿಗಳನ್ನು ಪರಿಹಾರವಾಗಿ ಖರ್ಚು ಮಾಡಿದ್ದಾರೆ. ಈ ಪರಿಹಾರ ಕೊಡುವುದನ್ನು ತಡೆಗಟ್ಟುವುದಕ್ಕೆ ಇವರು ಸೌರಶಕ್ತಿಯನ್ನು ಹಾಕುವುದಕ್ಕೆ ಏನಾದರೂ ಕ್ರಮಕ್ಕೈಗೊಳ್ಳುವುದಕ್ಕೆ ಮಾಸ್ಟರ್ ಪ್ಲಾನ್ ಮಾಡಿದ್ದಾರಾ? ಈ ಕಾಡಾನೆಗಳ ಹಾವಳಿಯನ್ನು ತಡೆಗಟ್ಟುವುದಕ್ಕೆ ಏನಾದರೂ ಮಾಸ್ಟರ್ ಪ್ಲಾನ್ ಮಾಡಿದ್ದಾರೆಯೇ ಎನ್ನುವ ಬಗ್ಗೆ ತಾವು ಹೇಳಬೇಕಾಗುತ್ತದೆ. ಏಕೆಂದರೆ ಮೊನ್ನೆ ದಿವಸ ಅವರು ಬಂದಿದ್ದರು, ಅವರು ಬಂದಂತಹ ಸಂದರ್ಭದಲ್ಲಿ ಅದನ್ನು ಮಾಡುತ್ತೇನೆಂದು ಹೇಳಿಕೊಂಡು ಹೋಗಿದ್ದಾರೆ. ಆದರೆ ಯಾವಾಗ ಮಾಡುತ್ತಾರೆಂದು ನಮಗೆ ಗೊತ್ತಿಲ್ಲ. ನಾವು ಅಧಿಕಾರಿಗಳನ್ನು

ಕೇಳಿದರೆ ದುಡ್ಡಿಲ್ಲವೆಂದು ಹೇಳುತ್ತಾರೆ, ಇದರ ಬಗ್ಗೆ ತಾವು ದಯವಿಟ್ಟು ಕೊಡಗಿನಲ್ಲಿ ಕಾಡಾನೆಯ ಹಾವಳಿಯನ್ನು ತಡೆಗಟ್ಟುವುದಕ್ಕೆ ಯಾರಿಗಾದರೂ ಸೌರಶಕ್ತಿಯನ್ನು ಪ್ರೈವೇಟ್‌ನವರಿಗೆ ಕಾಂಟ್ರಾಕ್ಟ್ ಕೊಟ್ಟುಬಿಡಿ. ಕೇವಲ 2 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೆ ಇದರ ಬಗ್ಗೆ ಶಾಶ್ವತವಾದ ಪರಿಹಾರವಾಗುತ್ತದೆ. ಅದರ ಬಗ್ಗೆ ನೋಡಿಕೊಳ್ಳುವುದಕ್ಕೆ ಮ್ಯಾನೇಜ್‌ಮೆಂಟ್‌ಗೆ ಕೂಡ ಪ್ರೈವೇಟ್‌ನವರಿಗೆ ಕೊಟ್ಟುಬಿಡಿ. ಇದನ್ನು ಸರ್ಕಾರದವರಿಗೆ ಕೊಟ್ಟರೆ ಅವರು ಮ್ಯಾನೇಜ್‌ಮೆಂಟ್ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಈಗಾಗಲೇ ಎಂ.ಪಿ. ಮತ್ತು ಎಂಎಲ್‌ಎ ಕೋಟಾದಿಂದ ಜಿಲ್ಲಾ ಪಂಚಾಯಿತಿಯಿಂದ ಸುಮಾರು ನಾವು 25 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಇಷ್ಟು ಹಣವನ್ನು ಖರ್ಚು ಮಾಡಿ ಸೋಲಾರ್ ಫೆನ್ಸಿಂಗ್ ಹಾಕಿದರೆ ಇದನ್ನು ಮೇಂಟ್‌ನೆನ್ಸ್ ಮಾಡುತ್ತಿಲ್ಲ. ವೋಲ್ಟೇಜ್ 6 ರಿಂದ 9 ಗಂಟೆಯವರೆಗೆ ಬಂದರೆ ಒಂದು ಆನೆಯೂ ಕೂಡ, ಒಂದು ಹಂದಿಯೂ ಕೂಡ ಅದರೊಳಗೆ ನುಗ್ಗುವುದಿಲ್ಲ. ಅದರ ಬಗ್ಗೆ ಪರ್ಮನೆಂಟಾಗಿ ಪ್ರೈವೇಟ್‌ನವರಿಗೆ ಕಾಂಟ್ರಾಕ್ಟ್ ಬೇಸಿಸ್ ಮೇಲೆ ಕೊಟ್ಟು ಅದನ್ನು ಮೇಂಟೆನೆನ್ಸ್ ಮಾಡಲು ಸರ್ಕಾರ ಯೋಚನೆ ಮಾಡುತ್ತದೆಯೇ ಎಂದು ಹೇಳಬೇಕು.

ಶ್ರೀ ಕೆ.ಹೆಚ್. ರಂಗನಾಥ್ : ಸೌರಶಕ್ತಿಯನ್ನು ಕೊಡಬೇಕೆಂಬುದರ ಬಗ್ಗೆ ವಿಚಾರ ಮಾಡಿದ್ದೇವೆ, ಅದರ ಬಗ್ಗೆ ಒಂದು ಅಭಿಪ್ರಾಯಕ್ಕೆ ಬಂದಿದ್ದೇವೆ. ಮತ್ತೆ ಸೌರಶಕ್ತಿಯನ್ನು ಕೊಡುವಾಗಲೂ ಅದನ್ನು ಒದಗಿಸುವಾಗಲೂ ಸರ್ಕಾರಕ್ಕೆ ಬದಲು ಅವರೇ ಮಾಡಿಕೊಳ್ಳುವಂತಹದ್ದನ್ನು ಮಾಡಬೇಕು ಎಂದರೆ ಅದನ್ನು ಮೇಂಟನೆನ್ಸ್ ಮಾಡಿಕೊಳ್ಳುವುದು ಅವರ ಜವಾಬ್ದಾರಿಯಾಗುತ್ತದೆ. ಇವತ್ತು ಸರ್ಕಾರದ ವತಿಯಿಂದ ಮಾಡುವಾಗ ಸ್ವಲ್ಪ ಅಶ್ರದ್ಧೆ ಕೆಲಸದಲ್ಲಾಗಬಹುದು, ಇನ್ನೆನಾದರೂ ಆಗಬಹುದು, ಮೇಂಟನೆನ್ಸ್ ಮಾಡುವ ಬಗ್ಗೆ ನಾವು ಹಣವನ್ನು ಒದಗಿಸದೆ ಇರತಕ್ಕಂತಹ ಪರಿಸ್ಥಿತಿ ಕೂಡ ಇರುತ್ತದೆ. ಇದು ವ್ಯಾಪಕವಾಗಿರುವಂತಹ ದೊಡ್ಡ ಪ್ರಶ್ನೆ, ಇದರ ಬಗ್ಗೆ ತೀವ್ರವಾಗಿ ವಿಚಾರ ಮಾಡಬೇಕೆಂಬ ಅಭಿಪ್ರಾಯಕ್ಕೆ ಬಂದಿದ್ದೇವೆ. ಕೊಡಗಿನ ಪ್ಲಾಂಟರ್ಸ್ ವಗೈರೆಯವರು ಮತ್ತೆ ತೊಂದರೆಯಾಗಿರುವವರ ಡೆಲಿಗೇಷನ್ ಕೂಡ ಬಂದಿತ್ತು. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೂ ಕೂಡ ಬಂದಿದೆ. ಮಾನ್ಯ ಮುಖ್ಯಮಂತ್ರಿಗಳು ನನಗೆ ಹೋಗಿ ಎಂದು ಹೇಳಿದ್ದರು. ನನಗೆ ಆರೋಗ್ಯ ಸರಿಯಿಲ್ಲದೆ ಅಪರೇಷನ್ ಆಗಿ ತೊಂದರೆಯಾಗಿದ್ದರಿಂದ ನಾನು ಹೋಗುವುದಕ್ಕೆ ಸಾಧ್ಯವಾಗಲಿಲ್ಲ. ನಾನು ನನ್ನ ಸಹೊದ್ಯೋಗಿಗಳಾದ ಶ್ರೀ ಕೃಷ್ಣಪ್ಪನವರನ್ನು ಕಳುಹಿಸಿದ್ದೆ. ತದನಂತರ ಮೊನ್ನೆ ಕೂಡ ನಾನು ಹೋಗಿದ್ದೆ. ನಾನು ಹೋಗಿ ಅವರೆಲ್ಲರನ್ನೂ ಭೇಟಿಯಾಗಿದ್ದೇನೆ, ಮತ್ತು ಕಂಡಿದ್ದೇನೆ. ಅವರು ಎಲ್ಲಾ ವಿಚಾರಗಳನ್ನೂ ಕೂಡ ಪ್ರಸ್ತಾಪ ಮಾಡಿದ್ದಾರೆ. ಮೇಲ್ಮಟ್ಟದ ಅಧಿಕಾರಿಗಳು ಕೂಡ ಸಿ.ಸಿ.ಎಫ್. ವೈಲ್ಡ್‌ಲೈಫ್ ಅವರೂ ಕೂಡ ಬಂದಿದ್ದರು. ಇದರ ಬಗ್ಗೆ ಸಮಗ್ರವಾದ ವಿಚಾರವನ್ನು ಮಾಡುತ್ತೇನೆ ಎನ್ನುವ ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಆದರೆ ಒಂದು ಪ್ರಶ್ನೆಯನ್ನೂ ಕೂಡ ತಾವು ಯೋಚನೆ ಮಾಡಬೇಕು. ಸೌರಶಕ್ತಿಯಿಂದ ಆನೆಗಳ ಹಾವಳಿಯನ್ನು ತಡೆಗಟ್ಟಬಹುದೆಂದರೆ, ಆನೆ ಕೂಡ ಬಹಳ ಬುದ್ಧಿವಂತ ಪ್ರಾಣಿ, ಅದೇನೂ ದಡ್ಡ ಪ್ರಾಣಿಯಲ್ಲ ನಾವು ಅಲ್ಲಿ ಕಂದಕವನ್ನು ತೆಗೆದಿದ್ದೇವೆ, ನಾನು ಅಲ್ಲಿಗೆ ಹೋಗುವಂತಹ ಸಂದರ್ಭದಲ್ಲಿ ಹೇಳುತ್ತಿರುತ್ತಾರೆ. ಅಲ್ಲಿ ಕಂದಕವನ್ನು ತೆಗೆದಿದ್ದೇವೆ, ಆ ಕಂದಕದ ಮೇಲೆ ಎರಡು ಮರ ಹಾಕಿಬಿಟ್ಟು, ಅದರ ಮೇಲೆ ಹೊರಟುಹೋಗಿಬಿಡುತ್ತದೆ ಎಂದು ಹೇಳಿದರು. ಅದಕ್ಕೆ ಒಂದು ಸಾರಿ ಹೀಗೆ ಮಾಡಿಕೊಳ್ಳಬಹುದು ಎಂದು ಗೊತ್ತಾದ ಮೇಲೆ ಅದು ಹಾಗೆಯೇ

ಮಾಡಿಬಿಡುತ್ತದೆ. ಹಾಗೆಯೇ ಸೌರಶಕ್ತಿಯ ಬೇಲಿಯನ್ನು ಹಾಕಿದರೂ ಕೂಡ ಅದನ್ನು ಧಾಟಿ ಹೋಗುವುದಕ್ಕೆ ಸಾಧ್ಯತೆ ಇದ್ದರೆ ಅದಕ್ಕೆ ತಿಳುವಳಿಕೆಗೆ ಬಂದರೆ ಅದು ಹಾಗೆಯೇ ಮಾಡಿಬಿಡುತ್ತದೆ. ಆದ್ದರಿಂದ ಪರಿಹಾರ ಎಲ್ಲದಕ್ಕೂ ಆಗುತ್ತದೆಂದು ಹೇಳುವುದಕ್ಕೆ ನೀವು ಆನೆನಾ? ಮಾನ್ಯ ಸದಸ್ಯರಾದ ಶ್ರೀ ಅಪ್ಪಚ್ಚುರಂಜನ್‌ರವರು ಆನೆನಾ ಸ್ವಾಮಿ? ಆನೆಯ ವರ್ಗಕ್ಕೆ ತಾವು ಸೇರುವುದಿಲ್ಲ ಸ್ವಾಮಿ.

ಶ್ರೀ ಅಪ್ಪಚ್ಚುರಂಜನ್ ಎಂ.ಪಿ : ನಾನು ಆನೆಯಾಗಿದ್ದರೆ ನಿಮ್ಮನ್ನು ಇಲ್ಲಿಂದ ಎಳೆದು ಬಿಸಾಡುತ್ತಿದ್ದೆವು. ನೀವು ಆ ಮಾತನ್ನು ಹೇಳಬೇಡಿ.

Sri K.H. Ranganath: Let him not take everything so seriously.

ಅಧ್ಯಕ್ಷರು : ಇದರ ಬಗ್ಗೆ ಸೀರಿಯಸ್ಸಾಗಿ ತಿಳಿದುಕೊಂಡು ಯೋಚನೆಯನ್ನು ಮಾಡುತ್ತಿದ್ದೇವೆಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ.

ಅಧ್ಯಕ್ಷರು : ಅಪ್ಪಚ್ಚುರಂಜನ್ ಅವರೆ, ಮಧ್ಯದಲ್ಲಿ ತಾವು ಮಾತನಾಡಬೇಡಿ, ಮಂತ್ರಿಗಳು ಮಾತನಾಡುವುದನ್ನು ಮುಗಿಸಲಿ. Let him complete.

ಶ್ರೀ ಕೆ.ಹೆಚ್. ರಂಗನಾಥ್ : ಹಾಸ್ಯವೂ ಕೂಡ ಈ ಮನೆಯಲ್ಲಿ ಬೇಕಾಗುತ್ತದೆ. ನಾನು ನಿಮಗೆ ಏನು ಹೇಳುವುದಿಲ್ಲಪ್ಪ. ಅದಕ್ಕೆ ನಾನು ನಿಮ್ಮ ನಾಯಕರಿಗೆ ಹೇಳಿದ್ದು. ಅವರಿಗೆ ಸ್ವಲ್ಪ ಹೇಳಿ. ಇದು ಸುಮ್ಮನೆ ಹೊಡೆದಾಡುವ ಸಭೆನಾ? ಹೊಡೆದಾಡಿದರೆ ಮಾತಿನಲ್ಲಿ ಹೊಡೆದಾಡಬೇಕು. ಇವರು ಆನೆಯಾಗಿದ್ದರೆ ಇಲ್ಲಿ ಒಳಗೆ ಬಿಟ್ಟುಕೊಳ್ಳುತ್ತಿದ್ದೆವೆಯೇ?

ಶ್ರೀ ಡಿ.ವಿ. ಸದಾನಂದಗೌಡ : ತಾವು ಹಿರಿಯ ಮಂತ್ರಿಗಳಾಗಿದ್ದೀರಿ, ಅವರು ಗೌರವಾನ್ವಿತ ಸದಸ್ಯರಾಗಿದ್ದುಕೊಂಡು, ಒಂದು ಆನೆಯಂತಹ ಪ್ರಾಣಿಗೆ.....

ಶ್ರೀ ಕೆ.ಹೆಚ್. ರಂಗನಾಥ್ : ಅವರು ಗೌರವಾನ್ವಿತ ಸದಸ್ಯರಾಗಿರುವುದರಿಂದ ಒಳಗೆ ಬಂದಿದ್ದಾರೆ.

ಶ್ರೀ ಡಿ.ವಿ. ಸದಾನಂದಗೌಡ : ಅವರನ್ನು ಆನೆ ಎಂದು ಹೇಳುವಂತಹದ್ದು ಸರಿಯೇ ಸಾರ್. ಅದು ಸರಿಯಲ್ಲ. ಕೊಡಗಿನವರು 3 ಜನ ಮಂತ್ರಿಗಳಿದ್ದಾರೆ, ಅವರು ಕೊಡಗಿಗೆ ಹೋಗುತ್ತಿಲ್ಲ. ಅವರ ಕಾರು ಓಡಾಟ ಮಾಡಿ ಸೈರನ್ ಹೊಡೆಯುತ್ತಿದ್ದರೆ ಆನೆಗಳು ಕೊಡಗಿಗೆ ಹೋಗುತ್ತಿರಲಿಲ್ಲ. ಅವರು ಎಲ್ಲೆಲ್ಲೋ ಇದ್ದಾರೆಂದು ಕಾಣಿಸುತ್ತದೆ. ಇಲ್ಲಿ ಮೂರು ಜನ ಮಂತ್ರಿಗಳು ಏನಿದ್ದಾರೆ, ಇವರು ಯಾರಾದರೂ ಆನೆಗಳ ಬಗ್ಗೆ ಮಾತನಾಡುತ್ತಾರೆಯೆ?

ಅಧ್ಯಕ್ಷರು : ಸರ್ಕಾರದವರು ಇದರ ಬಗ್ಗೆ ಸೀರಿಯಸ್ಸಾಗಿ ಮಾಡುತ್ತೇವೆಂದು ಹೇಳಿದ್ದಾರೆ.

ಶ್ರೀ ಡಿ.ವಿ. ಸದಾನಂದಗೌಡ : ಮತ್ತೆ ಮಾನ್ಯ ಅಪ್ಪಚ್ಚುರಂಜನ್‌ರವರ ಮೇಲೆ ಆ ತರಹ ಮಾತನಾಡುವುದು ಸರಿಯಲ್ಲ.

ಅಧ್ಯಕ್ಷರು : ಅಪ್ಪಚ್ಚುರವರೆ, ಸರ್ಕಾರದವರು ಸೀರಿಯಸ್ಸಾಗಿ ಯೋಚನೆ ಮಾಡುತ್ತೇವೆಂದು ಹೇಳಿದ್ದಾರೆ. ಮುಂದಿನ ಪ್ರಶ್ನೆ ಪೂಜಾರ್ ಅವರದ್ದು: ಕೇಳಿ.

ಶ್ರೀ ಎಸ್.ಎಸ್. ಪಾಟೀಲ್ : ಸದಾನಂದಗೌಡರೆ, ಸಾಮಾನ್ಯವಾಗಿ ಮನೆಯಲ್ಲಿ ತನ್ನ ಮಕ್ಕಳೇ ನಮ್ಮಪ್ಪ ಆನೆ ಎಂದು ಹೇಳುತ್ತಾರೆ. ಆನೆ ಇದ್ದ ಹಾಗೆ ನಮ್ಮಪ್ಪ ಎಂದು ಹೇಳುತ್ತಾರೆ. ಸುಮ್ಮನೆ ಅದರ ಬಗ್ಗೆ ಸೀರಿಯಸ್ಸಾಗಿ ಏಕೆ ತೆಗೆದುಕೊಳ್ಳುತ್ತೀರಿ?